ಓ.ಎಸ್-80/2023 ಡಿ.ಡಬ್ಲ್ಯೂ-4 (ಶಿವನಂಜೇಗೌಡ)

ದಿನಾಂಕಃ **17.12.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರತಿವಾದಿ ಪರ ಶ್ರೀ.ಎನ್.ಕೆ.ಎಸ್.ವಕೀಲರಿಂದ :**

(ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿಸಿ, ಕೇಳಿ ತಿಳಿದುಕೊಂಡು ಸರಿ ಮತ್ತು ಸತ್ಯವಾಗಿರುತ್ತವೆ ಎಂದು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ.)

**ಪಾಟೀ ಸವಾಲು : ವಾದಿ ಪರ ಶ್ರೀ ಎಸ್.ಕೆ.ವಕೀಲರಿಂದ :**

ಕೊಕ್ಕರೆ ಹುಂಡಿ ಮತ್ತು ಬೊಂತಗಳ್ಳಿ ಗ್ರಾಮ ಸ್ವಲ್ಪ ದೂರ ದೂರ ಇವೆ. ನಾನು 1995-2014 ರವರೆಗೆ ಚಿಕ್ಕಅಂಕನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ವಾಟರ್ ಮನ್ ಆಗಿ ಕೆಲಸ ಮಾಡಿರುತ್ತೇನೆ. ದಾವಾ ಆಸ್ತಿಯಲ್ಲಿರುವ ಮನೆಗೆ ನಾನು 2006 ರಲ್ಲಿ ನೀರಿನ ಸಂಪರ್ಕ ಕೊಟ್ಟಿರುತ್ತೇನೆ. ನಮ್ಮ ಮೇಲಾಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿ ಯಾರ ಮನೆಗೆ ನಲ್ಲಿ ಸಂಪರ್ಕ ಕಲ್ಪಿಸಿಕೊಡಬೇಕೆಂದು ಹೇಳುತ್ತಾರೋ ಅವರ ಮನೆಗೆ ನಲ್ಲಿ ಹಾಕುತ್ತೇನೆ. ನಾನು ನಲ್ಲಿ ಸಂಪರ್ಕ ನೀಡಲು ಹೋಗುವ ಮುಂಚೆ ಕಚೇರಿಗೆ ನೀಡಿದ ಅರ್ಜಿ ಹಾಗೂ ದಾಖಲೆಯನ್ನು ಪರಿಶೀಲಿಸಿಲ್ಲ. ಚಿಕ್ಕತಾಯಮ್ಮರವರ ಹೆಸರಿಗೆ ಆಗಿರುವ ಪತ್ರವನ್ನು ನಾನು ನೋಡಿರುತ್ತೇನೆ. ಆ ಪತ್ರವನ್ನು ನನಗೆ ಕೊಂಬ್ರಯ್ಯ ಹಾಗೂ ಚಿಕ್ಕತಾಯಮ್ಮರವರು ತೋರಿಸಿರುತ್ತಾರೆ. ಚಿಕ್ಕತಾಯಮ್ಮರವರ ಹೆಸರಿಗೆ ಆಸ್ತಿಯು ಕ್ರಯವಾಗಿರುವುದರಿಂದ ಅವರೇ ಮಾಲೀಕರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮಾತುಕತೆ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ಸದರಿ ಮಾತುಕತೆ 2006 ರಲ್ಲಿ ನನ್ನ ಮುಂದೆ ಆಗಿತ್ತು. ನನ್ನ ಮುಂದೆ ಮಾತುಕತೆಯಾಯಿತು ಎಂದು ಪ್ರಮಾಣ ಪತ್ರದಲ್ಲಿ ಹೇಳಿ ಬರೆಯಿಸಿಲ್ಲ. ನನ್ನ

ಸಮಕ್ಷಮ ಯಾವುದೇ ಮಾತುಕತೆ ಆಗಿಲ್ಲ, ಪ್ರತಿವಾದಿಗೆ ಅನುಕೂಲವಾಗಲೆಂದು ಅವರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. Secretary ಯವರೊಂದಿಗೆ ಷರೀಕಾಗಿ ಪ್ರತಿವಾದಿಯು ಆತನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ರಾಜಕೀಯವಾಗಿ ಪ್ರಬಲರಾಗಿರುತ್ತಾರೆ ಎಂದರೆ ಸುಳ್ಳು. ಅವರು ನಮ್ಮ ಪಂಚಾಯತಿಗೆ ಹೋಗಿ-ಬಂದು ಮಾಡಿರುತ್ತಾರೆ ಎಂದರೆ ಸುಳ್ಳು. ಅವರು ಪಂಚಾಯತಿಗೆ ಹೋಗಿ-ಬಂದು ಮಾಡುವುದರಿಂದ ಹಾಗೂ ನನಗೆ ಪರಿಚಯವಿರುವುದರಿಂದ ಅವರಿಗೆ ಅನುಕೂಲವಾಗಲೆಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**